# PRESS MEET ON

## TWO - DAY NATIONAL LEVEL SEMINAR ON

## "REFORMS IN BANKING,FINANCE AND INSURANCE SECTORS: ISSUES AND CHALLANGES"

**12-Feb-2020**




**Two-Day National Level Seminar on "Reforms in Banking, Finance and Insurance Sectors: Issues and Challenges" on 14th and 15th February 2020.**

Department of Commerce and Management and IQAC of Vidyavardhaka First Grade College, Sheshadri Iyer Road, Mysuru is organising Two-Day National Level Seminar on "Reforms in Banking, Finance and Insurance Sectors: Issues and Challenges" on 14th and 15th February 2020 at Sri.P.M.Chikkaboraiah Hall in college premises. So far the college set its bench mark by discussing various contemporary issues by providing platform for academicians, intellectual research scholars and

students to express their opinion on specified topic. This time the platform is open for interested interactions on Banking, Finance and Insurance.

On banking the seminar will focus on mergers and acquisitions of banks, net banking and green banking operations, customer relationship management in banking, technological advancement in banking, social banking systems and issues and future challenges of banks. The discussion will be held on Financial issues - The innovation made in financial markets, International financial reforms, changes made in entrepreneurial finance, various accounting systems, role of financial institutions in promoting various schemes of finance etc. The title insurance consists on new government insurance schemes, strategies followed in marketing insurance, perceptions of policy holders, insurance awareness in India, performs of life and health insurance in India, insurance service in economic development of India, rural insurance service and recent trends in insurance.

This event is scheduled to be inaugurated by Dr.M.Ramachandra Gowda, Vice Chancellor, Rani Chennamma University, Belgaum on 14th of February at 9.30 A.M. Keynote speaker is CA.N.Nithyananda, M.C.Member – Professional Sector, Chairman – Direct Taxes & Corporate Laws Committee. First day on 14th Feb 2020, Technical Session-I commence at 11.15 A.M to 1.00 P.M. on the topic "Developments in Accounting and Finance: A Paradigm Shift due to Technological Changes*". Resource Person is A.U.Prakash, Chartered Accountant and the session will be Chaired by Dr.N.Nagaraja, Professor and Chairman, DOS in Commerce, University of Mysore, Mysuru.

Technical Session-II from 2.00 P.M to 3.30P.M on the Topic of "Banking in the Digital Era: Issues and Challenges" Resource person will be Sri. Veerabhadrappa, Former Senior Vice President, Axis Bank, Bengaluru. The Chair person will be Sri.R.M.Chidambaram, Former Professor and Dean, Faculty of Management, Alagappa University, Tamilnadu. Paper Presentation session on the theme Banking is scheduled to 3.45 P.M. will be Chaired by Dr. Manju.S. Associate Professor of Commerce, P.G.Centre, Maharani's Commerce and Management College, Mysuru and Co-Chaired by Dr.Bhavani.M, Associate Professor & HOD, DOS in Commerce, Pooja Bhagavath Memorial College, P.G.Centre, Mysuru.

On 15th February 2020, Technical Session-III will commence from 10.00A.M. to 11.30A.M on the topic "Innovations in Insurance for Social and Economic Development". Resource person is Mr.C.Ramasamy, Former Senior Manager, LIC, Coimbatore, Tamilnadu. This session will be chaired by Dr.Aisha.M.Sheriff, Professor and Chairperson, B.N.Bahaddur Institute of Management Science, University of Mysore, Mysuru.

Panelists are Sri. Ramesh Sharma, Chief Manager, Canara Bank, Mysuru for Banking, Dr.R.S.Mani, Former Professor of Management, VIT University, Vellore, Tamilnadu for Finance, Sri.S.N.Prasad, Insurance Advisor, SBI Life Insurance & Star

Health Insurance, Mandya for Insurance and the Moderator will be Dr.Sathisha.H.K, P.G.Department, Govt. R.C.College of Commerce and Management, Bengaluru.

Followed by Paper presentation at 2.30 P.M. parallel session on Finance and Insurance will be hosted in satellite seminar rooms. For Finance the session will be chaired by Dr.R.Mahesh, Professor, B.N.Bahadur Institute of Management Science, University of Mysore, Mysuru and Co-Chaired by Dr.Vasanthi Reena Williams, Professor & HOD, DOS in Commerce, Vidyavikas P.G.Centre, Mysuru. For Insurance paper presentation session will be chaired by Chinthamani.R. Former Professor, Dept. Of Commerce, JSS College of Arts, Commerce & Science, and Co-Chaired by Dr.S.Ashwini, HOD, DOS in Commerce, Vidyavardhaka First Grade College, P.G.Centre, Mysuru. Around 55 papers will be presented by the delegates who have already registered from other states and Karnataka too.

Soon after the paper presentation session, certificates will be distributed for the paper presenters and participants. With this Two Day National Level Seminar will be concluded on 15th February 2020.









**ದಿನಾಂಕ:14.02.2020 ಹಾಗೂ 15.02.2020ರಂದು**
**"ಬ್ಯಾಂಕಿಂಗ್, ಹಣಕಾಸು ಹಾಗೂ ವಿಮಾ ಕ್ಷೇತ್ರಗಳಲ್ಲಿನ ಸುಧಾರಣೆ: ಸಮಸ್ಯೆಗಳು ಹಾಗೂ ಸವಾಲುಗಳು"**
**ಎಂಬ ವಿಷಯದ ಬಗ್ಗೆ** ಎರಡು ದಿನಗಳ ರಾಷ್ಟ್ರ ಮಟ್ಟದ ಸಮ್ಮೇಳನ

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾಶಾಸ್ತ್ರ ವಿಭಾಗ ಮತ್ತು ಐ.ಕ್ಯೂ.ಎ.ಸಿ ಘಟಕದ ವತಿಯಿಂದ ಎರಡು ದಿನಗಳ ರಾಷ್ಟ್ರ ಮಟ್ಟದ ಸಮ್ಮೇಳನವನ್ನು "ಬ್ಯಾಂಕಿಂಗ್, ಹಣಕಾಸು ಹಾಗೂ ವಿಮಾ ಕ್ಷೇತ್ರಗಳಲ್ಲಿನ ಸುಧಾರಣೆ: ಸಮಸ್ಯೆಗಳು ಹಾಗೂ ಸವಾಲುಗಳು" ಎಂಬ ವಿಷಯದ ಬಗ್ಗೆ ದಿನಾಂಕ:14.02.2020 ಮತ್ತು 15.02.2020ರಂದು ಕಾಲೇಜಿನ ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಈ ವಿಚಾರ ಸಮ್ಮೇಳನದಲ್ಲಿ ಶಿಕ್ಷಣ ತಜ್ಞರಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕ ವಿದ್ಯಾರ್ಥಿಗಳಿಗೆ ಭಾಗವಹಿಸಿ ಬ್ಯಾಂಕಿಂಗ್, ಹಣಕಾಸು ಹಾಗೂ ವಿಮಾ ವಿಷಯಗಳ ಬಗ್ಗೆ ಆಸಕ್ತಿಯುತವಾಗಿ ಹಾಗೂ ಮುಕ್ತವಾಗಿ ಚರ್ಚಿಸಿ ಅವರ ಅಭಿಪ್ರಾಯಗಳನ್ನು ಸೂಚಿಸಲು ವೇದಿಕೆಯನ್ನು ಕಲ್ಪಿಸಿಕೊಡಲಾಗಿದೆ.

ಸಮ್ಮೇಳನದಲ್ಲಿ ಬ್ಯಾಂಕಿಂಗ್‌ನ ವಿಷಯಕ್ಕೆ ಸಂಬಂಧಿಸಿದಂತೆ ಬ್ಯಾಂಕ್‌ಗಳ ವಿಲೀನ ಮತ್ತು ವಶಕ್ಕೆ ತೆಗೆದುಕೊಳ್ಳುವುದು, ನೆಟ್ ಬ್ಯಾಂಕಿಂಗ್ ಮತ್ತು ಹಸಿರು ಬ್ಯಾಂಕಿಂಗ್ ಪದ್ಧತಿ, ಗ್ರಾಹಕರ ಮತ್ತು ಬ್ಯಾಂಕುಗಳ ಸಂಬಂಧ ನಿರ್ವಹಣೆ, ಬ್ಯಾಂಕಿಂಗ್ ಪದ್ಧತಿಯಲ್ಲಿ ತಂತ್ರಜ್ಞಾನ ಅಳವಡಿಸುವಿಕೆ, ಸಾಮಾಜಿಕ ಬ್ಯಾಂಕಿಂಗ್ ಪದ್ಧತಿ, ಬ್ಯಾಂಕುಗಳ ಮುಂದಿರುವ ಸಮಸ್ಯೆಗಳು ಮತ್ತು ಸವಾಲುಗಳು ಇವುಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಹಣಕಾಸಿಗೆ ಸಂಬಂಧಿಸಿದಂತೆ ಹಣಕಾಸಿನ ಸಮಸ್ಯೆಗಳು, ಹಣಕಾಸು ಮಾರುಕಟ್ಟೆಯಲ್ಲಿ ಹೊಸತನ, ಅಂತರರಾಷ್ಟ್ರೀಯ ಹಣಕಾಸು ಬದಲಾವಣೆ, ಉದ್ಯಮ ಹಣಕಾಸಿನಲ್ಲಿ ಬದಲಾವಣೆ, ವಿವಿಧ ಲೆಕ್ಕಶಾಸ್ತ್ರದ ಪದ್ಧತಿಗಳು ಮತ್ತು ವಿವಿಧ ಹಣಕಾಸಿನ ಯೋಜನೆಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಹಣಕಾಸು ಸಂಸ್ಥೆಗಳ ಪಾತ್ರವನ್ನು ಚರ್ಚಿಸಲಾಗುತ್ತದೆ. ವಿಮಾ ಕ್ಷೇತ್ರದಲ್ಲಿ ಸರ್ಕಾರದ ಹೊಸ ವಿಮಾ ಯೋಜನೆಗಳು, ವಿಮಾ ಮಾರುಕಟ್ಟೆಯ ಕೌಶಲ್ಯತೆಗಳು, ವಿಮಾದಾರರ ಆಶೋತ್ತರಗಳು, ಭಾರತದಲ್ಲಿ ವಿಮೆಯ ಬಗ್ಗೆ ತಿಳುವಳಿಕೆ, ಜೀವ ವಿಮೆ, ಆರೋಗ್ಯ ವಿಮೆ, ಸಾಮಾನ್ಯ ವಿಮೆ, ಭಾರತದ ಅಭಿವೃದ್ಧಿಯಲ್ಲಿ ವಿಮಾ ಸೇವೆಯ ಪಾತ್ರ, ಗ್ರಾಮೀಣ ಪ್ರದೇಶದಲ್ಲಿ ಜೀವ ವಿಮೆ ಮತ್ತು ಇತರೆ ವಿಮೆಯ ಇತ್ತೀಚಿನ ಬೆಳವಣಿಗೆಯ ಬಗ್ಗೆ ವಿಷಯಗಳನ್ನು ಮಂಡಿಸಲಾಗುತ್ತದೆ.

ಸಮ್ಮೇಳನದ ಉದ್ಘಾಟನೆಯನ್ನು ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಡಾ.ಎಂ.ರಾಮಚಂದ್ರಗೌಡರವರು ನೆರವೇರಿಸುವರು. ಬೆಂಗಳೂರಿನ ಹೆಸರಾಂತ ಸನ್ನದು ಲೆಕ್ಕಿಗರು ಹಾಗೂ ಡೈರೆಕ್ಟ್ ಟ್ಯಾಕ್ಸ್ ಮತ್ತು ಕಾರ್ಪೊರೇಟ್ ಟ್ಯಾಕ್ಸ್ ಕಮಿಟಿಯ ಮುಖ್ಯಸ್ಥರಾದ ಶ್ರೀ.ಎನ್.ನಿತ್ಯಾನಂದ ಅವರು ದಿಕ್ಸೂಚಿ ಭಾಷಣವನ್ನು ನೆರವೇರಿಸುವರು.

ಸಮ್ಮೇಳನದ ಮೊದಲನೇ ದಿನ ದಿನಾಂಕ:14.02.2020ರಂದು ತಾಂತ್ರಿಕ ಅಧಿವೇಶನ 1 ಬೆಳಿಗ್ಗೆ 11.30ರಿಂದ 1.00ಗಂಟೆಯವರೆಗೆ **"ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ಅಭಿವೃದ್ಧಿ: ತಾಂತ್ರಿಕ ಬದಲಾವಣೆಗಳಿಂದಾಗಿ ಒಂದು ಮಾದರಿ ಬದಲಾವಣೆ"** ಎಂಬ ವಿಷಯದ ಬಗ್ಗೆ ನಡೆಯಲಿದ್ದು ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ.ಎನ್.ನಾಗರಾಜ ಅವರು ಅಧ್ಯಕ್ಷತೆ ವಹಿಸುವರು. ಸಂಪನ್ಮೂಲ ವ್ಯಕ್ತಿಯಾಗಿ ಮೈಸೂರಿನ ಹೆಸರಾಂತ ಸನ್ನದು ಲೆಕ್ಕಿಗರಾದ ಶ್ರೀ.ಎ.ಯು.ಪ್ರಕಾಶ್ ಅವರು ಭಾಗವಹಿಸುವರು.

–2–

ಎರಡನೇ ತಾಂತ್ರಿಕ ಅಧಿವೇಶನವು ಮಧ್ಯಾಹ್ನ ಊಟದ ನಂತರ 2.00 ರಿಂದ 3.300ರವರೆಗೆ **"ಡಿಜಿಟಲ್ ಯುಗದಲ್ಲಿ ಬ್ಯಾಂಕಿಂಗ್: ಸವಾಲುಗಳು ಮತ್ತು ಸಮಸ್ಯೆಗಳು"** ಎಂಬ ವಿಷಯದ ಬಗ್ಗೆ ನಡೆಯಲಿದ್ದು, ಅಧಿವೇಶನದ ಅಧ್ಯಕ್ಷರಾಗಿ ತಮಿಳುನಾಡಿನ ಅಳಗಪ್ಪ ವಿಶ್ವವಿದ್ಯಾನಿಲಯದ ವ್ಯವಹಾರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರು ಹಾಗೂ ಡೀನ್ ಅವರಾದ ಪ್ರೊ.ಆರ್.ಎಂ.ಚಿದಂಬರಮ್ ಅವರು ಭಾಗವಹಿಸುವರು. ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಆಕ್ಸಿಸ್ ಬ್ಯಾಂಕ್‌ನ ವಿಶ್ರಾಂತ ಹಿರಿಯ ಉಪಾಧ್ಯಕ್ಷರಾದ ಶ್ರೀ.ವೀರಭದ್ರಪ್ಪರವರು ಭಾಗವಹಿಸುವರು.

ಮಧ್ಯಾಹ್ನ 3.45 ರಿಂದ 5.00ರವರೆಗೆ ಬ್ಯಾಂಕಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಪತ್ರಿಕೆಗಳ ಮಂಡನೆ ಅಧಿವೇಶನವು ನಡೆಯಲಿದ್ದು ಅಧಿವೇಶನದ ಅಧ್ಯಕ್ಷರಾಗಿ ಮಹಾರಾಣಿ ಕಾಲೇಜು, ವಾಣಿಜ್ಯ ಸ್ನಾತಕೋತ್ತರ ವಿಭಾಗ ಸಹಪ್ರಾಧ್ಯಾಕರಾದ ಡಾ.ಮಂಜು.ಎಸ್ ಅವರು ಭಾಗವಹಿಸಲಿದ್ದಾರೆ. ಉಪಾಧ್ಯಕ್ಷರಾಗಿ ಪೂಜಾ ಭಗವತ್ ಸ್ನಾತಕೋತ್ತರ ಕೇಂದ್ರ, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಸಹಪ್ರಾಧ್ಯಾಪರಾದ ಡಾ.ಭವಾನಿ.ಎಂ ಅವರು ಭಾಗವಹಿಸುವರು.

ಸಮ್ಮೇಳನದ ಎರಡನೇ ದಿನ ದಿನಾಂಕ:15.02.2020ರಂದು ಬೆಳಿಗ್ಗೆ 10.00 ರಿಂದ 11.30ರವರೆಗೆ ಮೂರನೇ ತಾಂತ್ರಿಕ ಅಧಿವೇಶನವು **"ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ವಿಮೆಯಲ್ಲಿನ ಆವಿಷ್ಕಾರಗಳು"** ಎಂಬ ವಿಷಯದ ಬಗ್ಗೆ ಜರುಗಲಿದ್ದು, ಅಧಿವೇಶನದ ಅಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾನಿಲಯದ, ಬಿ.ಎನ್.ಬಹಾದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್‌ನ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ.ಆಯಿಷಾ ಎಂ ಷರೀಫ್ ಅವರು ಭಾಗವಹಿಸುವರು. ಸಂಪನ್ಮೂಲ ವ್ಯಕ್ತಿಯಾಗಿ ಕೊಯಂಬತೂರಿನ ಭಾರತೀಯ ಜೀವ ವಿಮೆಯ ವಿಶ್ರಾಂತ ಹಿರಿಯ ವ್ಯವಸ್ಥಾಪಕರಾದ ಶ್ರೀ.ಸಿ.ರಾಮಸಾಮಿ ಅವರು ಭಾಗವಹಿಸುವರು.

ಪೂರ್ವಾಹ್ನ 11.45 ರಿಂದ 1.30ರವರೆಗೆ ಫಲಕ ಚರ್ಚೆಯು ನಡೆಯಲಿದ್ದು ಅಧಿವೇಶನದಲ್ಲಿ ಚರ್ಚಾನಿರ್ವಾಹಕರಾಗಿ ಬೆಂಗಳೂರಿನ ಸರ್ಕಾರಿ ಆರ್.ಸಿ. ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಕಾಲೇಜು, ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕರಾದ ಡಾ.ಸತೀಶ.ಹೆಚ್.ಕೆ ಅವರು ಭಾಗವಹಿಸುವರು. ಬ್ಯಾಂಕಿಂಗ್ ವಿಷಯ ತಜ್ಞರಾಗಿ ಕೆನರಾ ಬ್ಯಾಂಕಿನ ಮುಖ್ಯ ವ್ಯವಸ್ಥಾಪಕರಾದ ಶ್ರೀ.ರಮೇಶ್ ಶರ್ಮ, ಹಣಕಾಸು ವಿಷಯ ತಜ್ಞರಾಗಿ ತಮಿಳುನಾಡಿನ ವೆಲ್ಲೂರಿನ ವಿಐಟಿ ವಿಶ್ವವಿದ್ಯಾನಿಲಯದ ವ್ಯವಹಾರ ಅಧ್ಯಯನದ ವಿಶ್ರಾಂತ ಪ್ರಾಧ್ಯಾಪ'ರಾದ ಡಾ.ಆರ್.ಎಸ್.ಮಣಿರವರು, ವಿಮಾ ವಿಷಯ ತಜ್ಞರಾಗಿ ಮಂಡ್ಯದ ಎಸ್.ಬಿ.ಐ ಲೈಫ್ ಇನ್ಶೂರೆನ್ಸ್ & ಸ್ಟಾರ್ ಹೆಲ್ತ್ ಇನ್ಶೂರೆನ್ಸ್‌ನ ವಿಮಾ ಸಲಹೆಗಾರರಾದ ಶ್ರೀ.ಎಸ್.ಎನ್.ಪ್ರಸಾದ್ ಅವರು ಭಾಗವಹಿಸುವರು.

ಮಧ್ಯಾಹ್ನ ಭೋಜನದ ನಂತರ 2.00 ರಿಂದ 4.30ರವರೆಗೆ ಹಣಕಾಸು ವಿಮಾ ವಿಷಯದ ಸಂಶೋಧನಾ ಪತ್ರಿಕಾ ಮಂಡನೆ ಅಧಿವೇಶನವು ಏಕಕಾಲದಲ್ಲಿ ಜರುಗಲಿದ್ದು ಹಣಕಾಸು ವಿಷಯಕ್ಕೆ ಅಧ್ಯಕ್ಷರಾಗಿ ಮೈಸೂರು ವಿಶ್ವವಿದ್ಯಾನಿಲಯದ, ಬಿ.ಎನ್.ಬಹಾದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್‌ನ ಪ್ರಾಧ್ಯಾಪಕರಾದ ಡಾ.ಆರ್.ಮಹೇಶ್ ಅವರು ಭಾಗವಹಿಸುವರು. ಉಪಾಧ್ಯಕ್ಷರಾಗಿ ವಿದ್ಯಾವಿಕಾಸ್ ಕಾಲೇಜು, ಸ್ನಾತಕೋತ್ತರ ಕೇಂದ್ರ ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ.ವಾಸಂತಿ ರೀನಾ ವಿಲಿಯಮ್ಸ್ ಅವರು ಭಾಗವಹಿಸುವರು. ವಿಮಾ ವಿಷಯಕ್ಕೆ ಅಧ್ಯಕ್ಷರಾಗಿ ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಸ್ನಾತಕೋತ್ತರ ಕೇಂದ್ರ, ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಚಿಂತಾಮಣಿ.ಆರ್ ಅವರು ಭಾಗವಹಿಸುವರು. ಉಪಾಧ್ಯಕ್ಷರಾಗಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಕೇಂದ್ರ, ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ.ಅಶ್ವಿನಿ.ಎಸ್.ಅವರು ಭಾಗವಹಿಸುವರು ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ತಿಳಿಸಿದರು.

ಸಮ್ಮೇಳನದ ಎರಡೂ ದಿನ ಹೊರ ರಾಜ್ಯಗಳು ಹಾಗೂ ನಮ್ಮ ರಾಜ್ಯದ ಪ್ರತಿನಿಧಿಗಳ ಆಯ್ದ 55 ಸಂಶೋಧನಾ ಪ್ರಬಂಧ ಪತ್ರಿಕೆಗಳನ್ನು ಮಂಡಿಸಲಾಗುವುದು. ನಂತರ ಪ್ರತಿನಿಧಿಗಳಿಗೆ ಪ್ರಮಾಣಪತ್ರವನ್ನು ನೀಡುವ ಮುಖೇಣ ಎರಡು ದಿನಗಳ ರಾಷ್ಟ್ರ ಮಟ್ಟದ ಸಮ್ಮೇಳನಕ್ಕೆ ತೆರೆ ಎಳೆಯಲಾಗುವುದು. ಪತ್ರಿಕಾ ಗೋಷ್ಠಿಯಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ.ಬಿ.ಎಂ.ಮಂಜುಳ, ಸಹ ಪ್ರಾಧ್ಯಾಪಕರಾದ ಪ್ರೊ.ರುಕ್ಮಿಣಿ.ಎಸ್.ಸಿ, ಸಹಾಯಕ ಪ್ರಾಧ್ಯಾಪಕರಾದ ಶ್ರೀಶಶಿಧರ್.ಎಸ್ ಅವರು ಹಾಜರಿದ್ದರು.